## 2018 ಕ.ತೀ.ವ 58

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್

ಶ್ರೀ ಹೆಚ್.ಎಂ. ರಾಜಪ್ಪ –ವಿರುದ್ಧ–
ಕರ್ನಾಟಕ ರಾಜ್ಯ, (ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು) ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಕರ್ನಾಟಕ ಕೃಷಿ ಮಾರುಕಟ್ಟೆ ಸಮಿತಿ ಅಧಿನಿಯಮ, 1966ರ 101 (1)(ii)ನೇ ಪ್ರಕರಣದಡಿ ಚುನಾಯಿತ ಗಣದ ಸದಸ್ಯನೆಂದು ಮುಂದುವರೆಯದ ಸಂದರ್ಭದಲ್ಲಿ ಆ ವ್ಯಕ್ತಿಯನ್ನು ಆ ರೆವೆನ್ಯೂ ಜಿಲ್ಲೆಗೆ ಸಂಬಂಧಿಸಿದಂತೆ ಸದಸ್ಯನೆಂದು ಪರಿಗಣಿಸಲಾಗುವುದಿಲ್ಲ. ಆದ್ದರಿಂದ, ಆತನನ್ನು ಆ ಜಿಲ್ಲೆಯ ಬೋರ್ಡಿನ ಸದಸ್ಯನೆಂದು ಪರಿಗಣಿಸುವುದು ಸಾಧ್ಯವಿಲ್ಲ.

ಈ ಅಧಿನಿಯಮದ 101, 104 ಮತ್ತು 106ನೇ ಪ್ರಕರಣಗಳನ್ನು ಒಟ್ಟಿಗೆ ಓದಿದಾಗ ಈ ಅಧಿನಿಯಮದ 101(1) (ii)ನೇ ಪ್ರಕರಣದ ಪ್ರಕಾರ ಮಂಡಲಿಗೆ ಚುನಾಯಿತನಾದ ಯಾರೇ ವ್ಯಕ್ತಿ, ಸಂಬಂಧಪಟ್ಟ ರೆವಿನ್ಯೂ ಜಿಲ್ಲೆಯಲ್ಲಿನ ಎಲ್ಲಾ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರನ್ನೊಳಗೊಂಡಿರುವ ಚುನಾಯಿತ ಗಣದ ಸದಸ್ಯನಾಗಿರುವುದು ನಿಂತು ಹೋದರೆ, ಮಂಡಲಿಯ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದೆಂಬುದನ್ನು ಸ್ಪಷ್ಟಪಡಿಸುತ್ತದೆ. ಬೇರೊಂದು ರೀತಿಯಲ್ಲಿ ಹೇಳುವುದಾದರೆ, ಸಂಬಂಧಪಟ್ಟ ಜಿಲ್ಲೆಯಲ್ಲಿ ಅವನು ಮಾರುಕಟ್ಟೆ ಸಮಿತಿಯಲ್ಲಿ ಅಧ್ಯಕ್ಷನಾಗಿರುವುದು ನಿಂತುಹೋದಲ್ಲಿ, ಅವನು, ಚುನಾಯಿತ ಗಣದ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು ಮತ್ತು ತತ್ಪರಿಣಾಮವಾಗಿ, ಮಂಡಲಿಯ ಸದಸ್ಯನಾಗಿರುವುದು ಸಹಾ ನಿಂತುಹೋಗತಕ್ಕದ್ದು.

*ರಿಟ್ ಅರ್ಜಿ ಸಂಖ್ಯೆ: 2155/2015 (ಎಪಿಎಂಸಿ), ದಿನಾಂಕ: 27ನೇ ಮಾರ್ಚ್, 2015.

**ಅರ್ಜಿದಾರನು, ದಾವಣಗೆರೆ ಜಿಲ್ಲೆಯಲ್ಲಿರುವ ಎಲ್ಲಾ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರನ್ನೊಳಗೊಂಡಿರುವ ದಾವಣಗೆರೆ ಜಿಲ್ಲೆಯ ಚುನಾಯಿತ ಗಣದ ಸದಸ್ಯನಾಗಿರುವುದು ನಿಂತು ಹೋದಲ್ಲಿ, ಅವನು, ಮಂಡಲಿಯ ಸದಸ್ಯನಾಗಿರುವುದು ಸಹ ನಿಂತುಹೋಗತಕ್ಕದ್ದು. ಹಾಗಾಗಿ, ಮಂಡಲಿಯ ಸದಸ್ಯನಾಗಿ ಅವನು ಮುಂದುವರೆಯುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಈ ರಿಟ್ ಅರ್ಜಿಯು ಯಾವುದೇ ಅರ್ಹತೆಯನ್ನು ಹೊಂದಿರುವುದಿಲ್ಲ.**

**ಆದ್ದರಿಂದ, ಅರ್ಜಿಯನ್ನು ವಜಾಗೊಳಿಸಲಾಗಿದೆ.**

ಅರ್ಜಿದಾರರ ಪರ: ಶ್ರೀ ಮುರಳೀಧರ್ ಬಿ.ಎನ್. – ವಕೀಲರು;
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಎ.ಸಿ. ಬಾಲರಾಜ್ – ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ (ಮೌಖಿಕ):**

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಪ್ರಕರಣ 101(1)(ii)ರ ಪ್ರಕಾರ ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಲಿಗೆ ಚುನಾಯಿತನಾದ ಯಾರೇ ವ್ಯಕ್ತಿಯು, ಸಂಬಂಧಪಟ್ಟ ರೆವಿನ್ಯೂ ಜಿಲ್ಲೆಯ ಮತದಾರರ ಮಂಡಲಿಯ ಸದಸ್ಯನಾಗಿರುವುದು ನಿಂತುಹೋದಲ್ಲಿ ಅವನು, ಈ ಅಧಿನಿಯಮದ, 104ನೇ ಪ್ರಕರಣದ ದೃಷ್ಟಿಯಿಂದ ಮಂಡಲಿಯ ಸದಸ್ಯನಾಗುವುದು ನಿಂತುಹೋಗುತ್ತದೆಯೇ? ಈ ರಿಟ್ ಅರ್ಜಿಯಲ್ಲಿ ಈ ಪ್ರಶ್ನೆಗೆ ಉತ್ತರಿಸುವುದು ಅಗತ್ಯವಾಗಿದೆ.

ಈ ಪ್ರಶ್ನೆಗೆ, ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

2. ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರನು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 (ಈ

ಅಧಿನಿಯಮ)ರ 106ನೇ ಪ್ರಕರಣದ ಪ್ರಕಾರ, ಮಂಡಲಿಯ ಸದಸ್ಯತ್ವದ ಅವನ ಅವಧಿಯು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚನ್ನಗಿರಿ ಇಲ್ಲಿ ಅವನು 2ನೇ ಮೇ 2016 ರವರೆಗೆ, ಸದಸ್ಯತ್ವ ಹುದ್ದೆಯಲ್ಲಿರುವ ಕಾರಣದಿಂದ, ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಲಿ (ಮಂಡಲಿಯ) ಸದಸ್ಯನಾಗಿ ಮುಂದುವರೆಸಲು ಘೋಷಿಸುವುದಕ್ಕಾಗಿ ಕೋರಿದ್ದಾನೆ. ಅರ್ಜಿದಾರರ ಎಪಿಎಂಸಿ, ಚನ್ನಗಿರಿಯ ಸದಸ್ಯತ್ವದ ಅವಧಿಯು, 2ನೇ ಮೇ 2016 ರವರೆಗೆ ಇರುತ್ತದೆಯೆಂದು ಹೇಳಲಾಗಿದೆ.

3. ಈ ಅರ್ಜಿಯಲ್ಲಿ ಎತ್ತಲಾದ ಪ್ರಶ್ನೆಯನ್ನು ಪರೀಕ್ಷಿಸುವುದಕ್ಕಾಗಿ, ಈ ಅಧಿನಿಯಮದ 101, 104 ಮತ್ತು 106ನೇ ಪ್ರಕರಣಗಳನ್ನು ಉದ್ಧರಿಸುವುದು ಪ್ರಸಕ್ತವಾದುದು, ಅದು ಈ ಮುಂದಿನಂತಿವೆ:

> ***101. ರಾಜ್ಯ ಕೃಷಿ ಮಾರುಕಟ್ಟೆ ಮಂಡಲಿಯ ರಚನೆ.*** *– (1) ಮಂಡಲಿಯು, ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–*
>
> *(i) ಕೃಷಿ ಉತ್ಪನ್ನ ಮಾರುಕಟ್ಟೆ ಖಾತೆಯ ರಾಜ್ಯಮಂತ್ರಿಯವರು ಮಂಡಲಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು;*
>
> *(ii) ರಾಜ್ಯದ ಪ್ರತಿಯೊಂದು ರೆವಿನ್ಯೂ ಜಿಲ್ಲೆಯಿಂದ, ಆ ಜಿಲ್ಲೆಯಲ್ಲಿರುವ ಎಲ್ಲಾ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರಿಂದ ಕೂಡಿದ ಚುನಾಯಿತ ಗಣವು ಗೊತ್ತುಪಡಿಸಿದ ರೀತಿಯಲ್ಲಿ ಆಯ್ಕೆ ಮಾಡಿದ, ಜಿಲ್ಲೆಯ ಒಂದು ಮಾರುಕಟ್ಟೆ ಸಮಿತಿಯ ಅಧ್ಯಕ್ಷನೂ ಆಗಿರುವ ಒಬ್ಬ ವ್ಯಕ್ತಿ;*
>
> *(iii) ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ ಅಥವಾ ಅವರು ನಾಮನಿರ್ದೇಶನ ಮಾಡಿದ ವ್ಯಕ್ತಿ, ಪದನಿಮಿತ್ತ;*

*(iv) ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಅಥವಾ ಅವರು ನಾಮನಿರ್ದೇಶನ ಮಾಡಿದ ವ್ಯಕ್ತಿ, ಪದನಿಮಿತ್ತ;*

*(v) ಕೃಷಿ ಮಾರುಕಟ್ಟೆ ನಿರ್ದೇಶಕರು;*

*ಪರಂತು, ಯಾವುದೇ ರೆವಿನ್ಯೂ ಜಿಲ್ಲೆಯಲ್ಲಿ ಕೇವಲ ಎರಡು ಮಾರುಕಟ್ಟೆ ಸಮಿತಿಗಳು ಇದ್ದರೆ, ಮತ್ತು ಆ ಸಮಿತಿಗಳ ಇಬ್ಬರೂ ಅಧ್ಯಕ್ಷರು ಅಂಥ ಜಿಲ್ಲೆಯಿಂದ ಚುನಾವಣೆಗಾಗಿ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರೆ ಆ ಮಂಡಲಿಯಲ್ಲಿ ಆ ಮಾರುಕಟ್ಟೆ ಸಮಿತಿಗಳನ್ನು ಪ್ರತಿನಿಧಿಸಬೇಕಾದ ವ್ಯಕ್ತಿಯನ್ನು ಚುನಾವಣಾ ಅಧಿಕಾರಿಯು ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು:*

*ಮತ್ತೂ ಪರಂತು, ಯಾವುದೇ ರೆವಿನ್ಯೂ ಜಿಲ್ಲೆಯಲ್ಲಿ ಒಂದೇ ಒಂದು ಮಾರುಕಟ್ಟೆ ಸಮಿತಿ ಇರುವಲ್ಲಿ ಅಂಥ ಸಮಿತಿಯ ಅಧ್ಯಕ್ಷನು ಆ ಮಂಡಲಿಯ ಸದಸ್ಯನಾಗತಕ್ಕದ್ದು.*

*(2) ಮಂಡಲಿಯು, ಚುನಾಯಿತ ಸದಸ್ಯರ ಪೈಕಿ ಒಬ್ಬನನ್ನು ಉಪಾಧ್ಯಕ್ಷರೆಂದು ಚುನಾಯಿಸತಕ್ಕದ್ದು.*

*(3) ಕೃಷಿ ಮಾರುಕಟ್ಟೆ ನಿರ್ದೇಶಕನು ಮಂಡಲಿಯ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕನಾಗಿರತಕ್ಕದ್ದು.*

***104. ಮಂಡಲಿಯ ಚುನಾಯಿತ ಸದಸ್ಯರ ಸದಸ್ಯತ್ವ ನಿಂತು ಹೋಗುವುದು.***– *101ನೇ ಪ್ರಕರಣದ (1)ನೇ ಉಪಪ್ರಕರಣದ (ii)ನೇ ಖಂಡದ ಮೇರೆಗೆ ಚುನಾಯಿತನಾದ ಸದಸ್ಯನು, ಸಂಬಂಧಪಟ್ಟ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರ ಚುನಾಯಿತ ಗಣದ*

*<u>ಸದಸ್ಯನಾಗಿರುವುದು ನಿಂತುಹೋದರೆ ಅವನು ಆ ಮಂಡಲಿಯ ಸದಸ್ಯನಾಗಿರುವುದು ನಿಂತು ಹೋಗತಕ್ಕದ್ದು.</u>*

*<u>106. ಮಂಡಲಿಯ ಸದಸ್ಯರ ಹುದ್ದೆಯ ಅವಧಿ.</u>– ಮಂಡಲಿಯ ಚುನಾಯಿತ ಸದಸ್ಯ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಐದು ವರ್ಷಗಳ ಅವಧಿಯವರೆಗೆ ಹುದ್ದೆಯಲ್ಲಿರತಕ್ಕದ್ದು.*

*ಪರಂತು, ಮಂಡಳಿಯ ಚುನಾಯಿತ ಸದಸ್ಯರ ಹುದ್ದೆಯ ಅವಧಿಯನ್ನು, ಕ್ರಮಬದ್ಧವಾಗಿ ಚುನಾಯಿತರಾದ ಸದಸ್ಯರು ಪ್ರಾರಂಭಿಸಿದ ಹುದ್ದೆಯ ಅವಧಿಯವರೆಗೆ ಮುಂದುವರೆಸತಕ್ಕದ್ದೆಂದು ಭಾವಿಸತಕ್ಕದ್ದು.*

*(ಒತ್ತು ನೀಡಲಾಗಿದೆ)*

4. ಈ ಅಧಿನಿಯಮದ 101, 104 ಮತ್ತು 106ನೇ ಪ್ರಕರಣಗಳನ್ನು ಒಟ್ಟಿಗೆ ಓದಿದಾಗ ಈ ಅಧಿನಿಯಮದ 101(1)(ii)ನೇ ಪ್ರಕರಣದ ಪ್ರಕಾರ ಮಂಡಲಿಗೆ ಚುನಾಯಿತನಾದ ಯಾರೇ ವ್ಯಕ್ತಿ, ಸಂಬಂಧಪಟ್ಟ ರೆವಿನ್ಯೂ ಜಿಲ್ಲೆಯಲ್ಲಿನ ಎಲ್ಲಾ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರನ್ನೊಳಗೊಂಡಿರುವ ಚುನಾಯಿತ ಗಣದ ಸದಸ್ಯನಾಗಿರುವುದು ನಿಂತು ಹೋದರೆ, ಮಂಡಲಿಯ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದೆಂಬುದನ್ನು ಸ್ಪಷ್ಟಪಡಿಸುತ್ತದೆ. ಬೇರೊಂದು ರೀತಿಯಲ್ಲಿ ಹೇಳುವುದಾದರೆ, ಸಂಬಂಧಪಟ್ಟ ಜಿಲ್ಲೆಯಲ್ಲಿ ಅವನು ಮಾರುಕಟ್ಟೆ ಸಮಿತಿಯಲ್ಲಿ ಅಧ್ಯಕ್ಷನಾಗಿರುವುದು ನಿಂತುಹೋದಲ್ಲಿ, ಅವನು ಚುನಾಯಿತ ಗಣದ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು ಮತ್ತು ತತ್ಪರಿಣಾಮವಾಗಿ, ಮಂಡಲಿಯ ಸದಸ್ಯನಾಗಿರುವುದು ಸಹಾ ನಿಂತುಹೋಗತಕ್ಕದ್ದು. ಈ ಅಧಿನಿಯಮದ 106ನೇ ಪ್ರಕರಣದಲ್ಲಿ ಹೇಳಲಾದ ಮಂಡಲಿಯ ಸದಸ್ಯರ ಪದಾವಧಿಯು, 104ನೇ ಪ್ರಕರಣಕ್ಕೊಳಪಟ್ಟು, "ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು" ಎಂಬ ಪದಗಳ ದೃಷ್ಟಿಯಿಂದ, ಈ ಅಧಿನಿಯಮದ 106ನೇ ಪ್ರಕರಣದಲ್ಲಿ ಸೇರಿಸಲಾಗಿದೆ. ಹಾಗಾಗಿ, 104ನೇ

ಪ್ರಕರಣವನ್ನು 106ನೇ ಪ್ರಕರಣದ ಮೇಲೆ ಪರಿಣಾಮಕಾರಿಯಾಗಿ ಅಧ್ಯಾರೋಹಿಸಲಾಗಿದೆ.

5. ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅರ್ಜಿದಾರನು, ದಾವಣಗೆರೆ ಜಿಲ್ಲೆಯಲ್ಲಿರುವ, ಚೆನ್ನಗಿರಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿರುವುದು ನಿಂತುಹೋಗಿದೆ ಮತ್ತು ಪ್ರಸ್ತುತವಾಗಿ, ಅವನು, ಸದಸ್ಯ ಮಾತ್ರವಾಗಿದ್ದಾನೆಂಬ ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ವಾದವು ವಿವಾದಿತವಲ್ಲ. ಅದು ಹಾಗೇ ಹಾಗಿದ್ದ ಪಕ್ಷದಲ್ಲಿ, ಮೇಲೆ ಹೇಳಲಾದಂತೆ, ಅವನು, ಈ ಅಧಿನಿಯಮದ 104ನೇ ಪ್ರಕರಣದ ದೃಷ್ಟಿಯಿಂದ ಮಂಡಲಿ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

6. ಅರ್ಜಿದಾರನು, ದಾವಣಗೆರೆ ಜಿಲ್ಲೆಯಲ್ಲಿರುವ ಎಲ್ಲಾ ಮಾರುಕಟ್ಟೆ ಸಮಿತಿಗಳ ಅಧ್ಯಕ್ಷರನ್ನೊಳಗೊಂಡಿರುವ ದಾವಣಗೆರೆ ಜಿಲ್ಲೆಯ ಚುನಾಯಿತ ಗಣದ ಸದಸ್ಯನಾಗಿರುವುದು ನಿಂತು ಹೋದಲ್ಲಿ, ಅವನು, ಮಂಡಲಿಯ ಸದಸ್ಯನಾಗಿರುವುದು ಸಹ ನಿಂತುಹೋಗತಕ್ಕದ್ದು. ಹಾಗಾಗಿ, ಮಂಡಲಿಯ ಸದಸ್ಯನಾಗಿ ಅವನು ಮುಂದುವರೆಯುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಈ ರಿಟ್ ಅರ್ಜಿಯು ಯಾವುದೇ ಅರ್ಹತೆಯನ್ನು ಹೊಂದಿರುವುದಿಲ್ಲ.

ಅರ್ಜಿಯನ್ನು ವಜಾಗೊಳಿಸಲಾಗಿದೆ.

---